ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 189-193
Bi-Monthly, Peer-Reviewed, Open Access, Indexed Journal

I S S N: 2583-3510
S I R D F
J O U R N A L S
editor@srujani.in
www.srujani.in

# ಕನ್ನಡದ ಐತಿಹಾಸಿಕ ಕಾದಂಬರಿಯಲ್ಲಿ ಯುದ್ಧ ಮತ್ತು ಮಹಿಳೆ

**ಜಯಲಕ್ಷ್ಮಿ ಟಿ.**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

***Abstract:***
*ಈ ಹಿಂದೆ ನಡೆದ ಘಟನೆಗಳನ್ನು ವಸ್ತುವನ್ನಾರಿಸಿಕೊಂಡು ರಚಿಸಿದ ಕಾದಂಬರಿ ಐತಿಹಾಸಿಕ ಕಾದಂಬರಿ ಎನಿಸಿಕೊಳ್ಳುತ್ತದೆ. ಇತಿಹಾಸಕಾರನಿಗೆ ವೈಯಕ್ತಿಕ ಅಭಿಮತಕ್ಕಾಗಲಿ ಸ್ವಂತ ಕಲ್ಪನೆಗಾಗಲಿ ಅವಕಾಶವಿಲ್ಲ. ಆದರೆ ಕಾದಂಬರಿಯನ್ನು ಸಾಹಿತಿ ತಾನೇ ಬರೆಯುವುದರಿಂದ ವಸ್ತುವಿಷಯದ ಆಯ್ಕೆ, ಬದಲಾವಣೆಯಲ್ಲಿ ತನ್ನ ಕಲ್ಪನೆ ಮತ್ತು ಅಭಿರುಚಿಗೆ ತಕ್ಕಂತೆ ರಚಿಸಲು ಅಷ್ಟಿಷ್ಟು ಅವಕಾಶವಿರುತ್ತದೆ. ಇಲ್ಲಿ ಬರಹಗಾರ ಇತಿಹಾಸದ ಹೊಣೆಗಾರಿಕೆ ಮತ್ತು ಕಾದಂಬರಿಯ ಹೊಣೆಗಾರಿಕೆ ಎರಡನ್ನು ಕೂಡ ಸರಿದೂಗಿಸಿಕೊಂಡು ಹೋಗಬೇಕಾದ ಅನಿವಾರ್ಯತೆ ಮತ್ತು ಸಮಸ್ಯೆ ಕಾದಂಬರಿಕಾರನದು. ಕನ್ನಡದಲ್ಲಿ ಸಾಕಷ್ಟು ಐತಿಹಾಸಿಕ ಕಾದಂಬರಿಗಳು ಪ್ರಕಟಗೊಂಡಿದ್ದು ಪ್ರಸ್ತುತ ಲೇಖನದಲ್ಲಿ ಈ ಐತಿಹಾಸಿಕ ಕಾದಂಬರಿಗಳಲ್ಲಿ ಕಂಡು ಬರುವ ಯುದ್ಧ ಮತ್ತು ಮಹಿಳೆ ಕುರಿತು ವಿಮರ್ಶಿಸಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ಐತಿಹಾಸಿಕ ಕಾದಂಬರಿ, ಮಹಿಳೆ, ಯುದ್ಧ.*

## ಪೀಠಿಕೆ

ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಐತಿಹಾಸಿಕ ಕಾದಂಬರಿಗಳು ಪ್ರಕಟಗೊಂಡಿವೆ ಅದರಲ್ಲೂ ಬಂದಿವೆ. ಅದರಲ್ಲೂ ತರಾಸು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ.ವಿ. ಅಯ್ಯರ್, ವಸುಧೇಂದ್ರ, ಶತಾವಧಾನಿ ಆರ್ ಗಣೇಶ್, ಅನಕೃ, ಗಜಾನನ ಶರ್ಮಾ ಮುಂತಾದವರು ಪ್ರಮುಖರು. ತರಾಸುವರ ದುರ್ಗಾಸ್ತಮಾನ, ಹೋಯ್ಸಳೇಶ್ವರ ವಿಷ್ಣುವರ್ಧನ, ರಕ್ತರಾತ್ರಿ, ಕಂಬನಿಯ ಕುಯಿಲು, ತಿರುಗುಬಾಣ, ಕೆ.ವಿ. ಅಯ್ಯರ್‌ರವರ ಶಾಂತಲಾ, ರೂಪದರ್ಶಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಚಿಕವೀರರಾಜೇಂದ್ರ, ಚನ್ನಬಸವನಾಯಕ ಮುಂತಾದ ವುಗಳನ್ನು ಹೆಸರಿಸಬಹುದು. ಇದರಲ್ಲಿ ಐತಿಹಾಸಿಕ, ಮತ್ತು ಐತಿಹಾಸಿಕ ವಿಷಯಗಳಿಗೆ ಕಲ್ಪನೆಯನ್ನೂ ಬೆರೆಸಿ ಬರೆದಿರುವ ಕಾದಂಬರಿಗಳೂ ಸೇರಿಕೊಂಡಿವೆ.

ಗಜಾನನ ಶರ್ಮ ಅವರು ಬರೆದ ಐತಿಹಾಸಿಕ ಕಾದಂಬರಿ ಚೆನ್ನಭೈರಾದೇವಿ. ದಕ್ಷಿಣ ಕೊಂಕಣ ಹಾಗೂ ಮಲೆನಾಡನ್ನು 54 ವರ್ಷಗಳವರೆಗೂ ಆಳಿದ ಚೆನ್ನಭೈರಾದೇವಿಯ ಬದುಕಿನ ಅಪರೂಪದ ಘಟನೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಪುಟ ಪುಟದಲ್ಲೂ ರೋಮಾಂಚನಗೊಳಿಸುವ ವಿವರಗಳ ಜತೆಗೇ ರಾಜನೀತಿ, ಜೀವನ ವಿಧಾನ, ಧೀಮಂತಿಕೆ, ಉತ್ಕಟವಾದ ಪ್ರೇಮ ಮತ್ತು ಹೆಣ್ಣಿನ ಅಂತಃಸತ್ವವನ್ನು ತೆರೆದಿಡುವ ಈ ಕೃತಿಯು ಕನ್ನಡದ ಪ್ರಮುಖ ಚಾರಿತ್ರಿಕ ಕಾದಂಬರಿಗಳಲ್ಲಿ ಒಂದಾಗಿದೆ.

## ಯುದ್ಧ

ಯುದ್ಧ ಮಾನವನ ಬದುಕಿನ ಅವಿಭಾಜ್ಯ ಅಂಗ. ಇದು ಎಲ್ಲಾ ಜೀವಿಗಳ ಮೂಲ ಸ್ವಭಾವಗಳಲ್ಲಿ

***Please cite this article as:*** ಜಯಲಕ್ಷ್ಮಿ ಟಿ. (2023). ಕನ್ನಡದ ಐತಿಹಾಸಿಕ ಕಾದಂಬರಿಯಲ್ಲಿ ಯುದ್ಧ ಮತ್ತು ಮಹಿಳೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(1), 189–193.

ಒಂದಾಗಿ ಬೆರೆತಿದೆ. ಪ್ರಾಣಿ ಪಕ್ಷಿಗಳಲ್ಲೂ ಆಹಾರಕ್ಕಾಗಿ ಗೂಡಿಗಾಗಿ ಸಂತತಿ ನಿರ್ಮಾಣಕ್ಕಾಗಿ ಕಾದಾಟವಿದೆ. ತನಗಾಗಿ ತನ್ನವರಿಗಾಗಿ ಕಾದಾಡುವುದೇ 'ಯುದ್ಧ'ದ ಮೂಲವೆನಿಸುತ್ತದೆ. ಆದರೆ ಮನುಷ್ಯ ಮಾತ್ರ ಸ್ವಾರ್ಥ ಲಾಲಸೆಗಾಗಿ, ಅಹಂಕಾರದ ತಣಿಕೆಗಾಗಿ ಕಾದಾಡುತ್ತಾನೆ. ಕಾದಾಟಕ್ಕಾಗಿಯೇ ವ್ಯವಸ್ಥೆಯೊಂದನ್ನು ವ್ಯವಸ್ಥೆಯೊಂದನ್ನು ನಿರ್ಮಾಣ ಮಾಡುತ್ತಾನೆ. ಈ ವ್ಯವಸ್ಥಿತ ಕಾದಾಟವೇ ಯುದ್ಧ. ನದಿ ತೀರದಲ್ಲಿ ವಾಸಮಾಡುತ್ತಿದ್ದ ನಾಗರಿಕ ಮನುಷ್ಯರಿಗೆ ಬೇರೆ ಪ್ರದೇಶಗಳಿಂದ ಬಂದ ಭಿನ್ನ ಸಂಸ್ಕೃತಿಯ ಜನರೊಂದಿಗೆ ದಿನನಿತ್ಯ ಸಂಘರ್ಷಗಳು ನಡೆಯುತ್ತಿದ್ದವು ಹೀಗೆ ನಡೆಯುತ್ತಿದ್ದ ಸಂದರ್ಭದಲ್ಲಿ 'ತನ್ನ' ಮತ್ತು 'ಬೇರೆಯ' ಎಂಬ ಭಾವ ಎಂದು ಹುಟ್ಟಿತೋ ಅಂದೆ ಯುದ್ಧದ ಬೀಜ ಹುಟ್ಟಿತು.

**ಮಹಿಳೆ**

ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗೆ ಪೂಜ್ಯ ಸ್ಥಾನವಿದೆ. ಸ್ತ್ರೀಯನ್ನು ಆದಿಶಕ್ತಿ ಎಂದು ಕರೆದು ಪೂಜಿಸಿದ್ದಾರೆ. ಪುರಾಣ ಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿಗೆ ಪ್ರಾಮುಖ್ಯತೆ ಇದ್ದದ್ದು ಗಮನಾರ್ಹ ಅಂಶ. ಪಾಂಡವರನ್ನು ಕುಂತಿಯ ಮಕ್ಕಳು ಎಂಬ ಅರ್ಥದಲ್ಲಿ ಕೌಂತೇಯರು ಎಂದೇ ಮಹಾಭಾರತದಲ್ಲಿ ಉಲ್ಲೇಖಿಸಿರುವುದನ್ನು ಗಮನಿಸಬಹುದು. ಶ್ರೀರಾಮನನ್ನು ಕುರಿತು ಹೇಳುವಾಗಲೂ ಕೌಸಲ್ಯಾಸುತ ಎಂಬ ಉಲ್ಲೇಖ ಗಮನಾರ್ಹ ಅಂಶ. ಪುರಾಣಗಳಲ್ಲಿ ದೇವರುಗಳನ್ನು ಹೆಸರಿಸುವಾಗ ಲಕ್ಷ್ಮಿನಾರಾಯಣ, ಪಾರ್ವತಿ ಪರಮೇಶ್ವರ, ಸೀತಾರಾಮ ಹೀಗೆ ಮೊದಲಿಗೆ ಅವರ ಪತ್ನಿಯರ ಹೆಸರನ್ನು ಹೇಳಿ ನಂತರ ಪುರುಷ ದೇವರ ಹೆಸರನ್ನು ಉಲ್ಲೇಖಿಸುವುದನ್ನು ಗಮನಿಸಿದರೆ ಹೆಣ್ಣಿಗೆಯಿದ್ದ ಪ್ರಾಮುಖ್ಯತೆ ತಿಳಿದುಬರುತ್ತದೆ.

ವೇದ ಪುರಾಣಗಳ ಕಾಲದ ನಂತರ ಇತಿಹಾಸ ಕಾಲದಲ್ಲಿಯೂ ಇದು ಮುಂದುವರೆದಿದ್ದು, ಭಾರತವನ್ನಾಳಿದ ಅತ್ಯಂತ ಪ್ರಾಚೀನ ರಾಜ ವಂಶವೆಂದು ಪ್ರಸಿದ್ಧವಾಗಿರುವ ಮೌರ್ಯವಂಶದ ಹೆಸರು "ಮುರ" ಎಂಬ ಹೆಣ್ಣಿನಿಂದಲೇ ರೂಪುಗೊಂಡಿದೆ. ಮೌರ್ಯವಂಶದ ಸಂಸ್ಥಾಪಕನಾದ ಚಂದ್ರಗುಪ್ತಮೌರ್ಯನ ತಾಯಿಯ ಹೆಸರು "ಮುರ" ಆಕೆಯಿಂದಲೇ ಈ ವಂಶಕ್ಕೆ ಮೌರ್ಯ ಎಂಬ ಹೆಸರು ಪ್ರಾಪ್ತವಾಯಿತು.

ಜಗತ್ತಿನ ಪ್ರತಿಯೊಂದು ಯುದ್ಧಕ್ಕೂ ಹೊನ್ನು, ಮಣ್ಣು, ಹೆಣ್ಣು ಕಾರಣ ಎಂಬುದು ಸಾಮಾನ್ಯ ತಿಳುವಳಿಕೆ. ರಾಜ್ಯ ಸಾಮ್ರಾಜ್ಯಗಳಿಗಾಗಿ, ಆಸ್ತಿ ಸಂಪತ್ತಿಗಾಗಿ ಯುದ್ಧ ಎಂಬುದು ಹಸಿದು ಮಲಗಿರುವ ಹುಲಿಯಂತೆ ಅದನ್ನು ಎಚ್ಚರಿಸುವ ಮೊದಲು ನೂರಾರು ಬಾರಿ ಯೋಚಿಸಬೇಕು. ಒಮ್ಮೆ ಅದನ್ನು ಎಚ್ಚರಿಸಿದರೆ ಅದು ಎಲ್ಲವನ್ನು ತನ್ನ ಹಸಿದ ಹೊಟ್ಟೆಗೆ ಆಹುತಿ ತೆಗೆದುಕೊಳ್ಳುತ್ತದೆ. ಯುದ್ಧದ ಮುಂದೆ ಪ್ರೀತಿ–ಪ್ರೇಮ, ತಂದೆ–ಮಗ ಇಂತಹ ಸಂಬಂಧಗಳು ಗೌಣವಾಗುತ್ತವೆ. ರಾಣಿ ಎಲಿಜಬೆತ್‌ಳಾಗಲಿ, ರಾಣಿ ಕ್ಯಾಥರಿನಾಳಾಗಲಿ (ಜರ್ಮನ್ ರಾಣಿ) ಎಂಥ ಕಠಿಣ ಪ್ರಸಂಗಗಳು ಎದುರಿಗೆ ಬಂದರೂ ಅವರು ಸ್ವತಃ ರಣರಂಗಕ್ಕೆ ಹೋಗಿ ಯುದ್ಧ ಮಾಡಲಿಲ್ಲ ಆದರೆ ರಾಣಿ ಚೆನ್ನಮ್ಮಾಜಿ, ಝಾನ್ಸಿ ಲಕ್ಷ್ಮಿಬಾಯಿಯವರು ಸ್ವತಃ ಖಡ್ಗಗಳನ್ನು ಹಿಡಿದು ತಮ್ಮ ಜೀವನವನ್ನೇ ಪಣಕ್ಕಿಟ್ಟು ಹೋರಾಡಿದವರು. ಇವರು ತೋರಿದ ಅಸಾಮಾನ್ಯ ಧೈರ್ಯ–ಸ್ಥೈರ್ಯಗಳು ಇವರ ಹಿರಿಮೆ ಗರಿಮೆ ಯನ್ನು ವೃದ್ಧಿಸಿವೆ.

ತಾಳಿಕೋಟೆ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯವು ಪತನವಾದ ನಂತರ ದಕ್ಷಿಣದಲ್ಲಿ ಅನೇಕ ಸಣ್ಣ ಪುಟ್ಟ ಸಂಸ್ಥಾನಗಳು ಬಂಧನದಿಂದ ಮುಕ್ತಿಪಡೆದಂತಹ ಸ್ವತಂತ್ರವಾದ ಆಳ್ವಿಕೆಯನ್ನು ಮಾಡತೊಡಗಿದ ಸಂಸ್ಥಾನಗಳಲ್ಲಿ ಕಿತ್ತೂರು ಸಂಸ್ಥಾನವು ಒಂದು. ಭಾರತ ದೇಶದಲ್ಲಿ ಪ್ರಥಮವಾಗಿ ಸ್ವಾತಂತ್ರ್ಯದ ಕಹಳೆಯನ್ನು ಊದಿದ ಏಕೈಕ ಮಹಿಳೆ ಎಂದರೆ ಚೆನ್ನಮ್ಮಾಜಿ. ಸತಿಸಹಗಮನ ಪದ್ಧತಿಯ ಹೆಸರಿನಲ್ಲಿ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದ

ಸಂದರ್ಭದಲ್ಲಿ ಧೈರ್ಯ, ಸಾಹಸ, ಪ್ರೀತಿ, ಮಮಕಾರ, ವಾತ್ಸಲ್ಯದ ಮೂಲಕ ಕಾಕತೀಯ ಮಗಳು ಕಿತ್ತೂರಿನ ಸೊಸೆ ನಾಡಿಗಾಗಿ ಹೋರಾಡಿದ ಧೈರ್ಯ ಮಹಿಳೆಯಾಗಿದ್ದಳು.

**ಕಿತ್ತೂರಿನ ರಾಣಿ ಚೆನ್ನಮ್ಮ**

ಚೆನ್ನಮ್ಮನ ರಾಜ್ಯಾಡಳಿತದಲ್ಲಿ ಸಮರ್ಥಳು ಹಾಗೂ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವದಿಂದಾಗಿ ಜನಾನುರಾಗಿಯೂ ಆಗಿದ್ದರು. ವಿಜಯಲಕ್ಷ್ಮಿ ಶಿವಕುಮಾರ ಕೌಟಗೆರವರು ತಮ್ಮ ಐತಿಹಾಸಿಕ 'ಸ್ವಾತಂತ್ರ್ಯದ ಕಿಚ್ಚು ಕಿತ್ತೂರು ರಾಣಿ ಚೆನ್ನಮ್ಮ' ಕಾದಂಬರಿಯಲ್ಲಿ ರಾಣಿ ಚೆನ್ನಮ್ಮ ಸಾಹಸ, ಧೈರ್ಯ, ವೀರತನ, ಛಲ ಮುಂತಾದವುಗಳನ್ನು ರೋಚಕವಾಗಿ ಕಟ್ಟಿಕೊಡುತ್ತಾರೆ. ಯುದ್ಧ ಕಲೆಗಳನ್ನು ನಿಷ್ಣಾತಳಾಗಿದ್ದ ಕನ್ನಡ ನಾಡಿನಲ್ಲಿ ಆಳಿದ ಧೀರ ಮಹಿಳೆ ರಾಣಿ ಚೆನ್ನಮ್ಮ ಆಡಳಿತದಲ್ಲಿ ಮಲ್ಲಸರ್ಜನಿಗೆ ನೆರವಾಗಿ ನಿಂತಳು. ಒಂದು ಕಡೆ ಮರಾಠರು ಮತ್ತೊಂದು ಕಡೆ ಟಿಪ್ಪು ಈ ಪ್ರಾಂತ್ಯವನ್ನು ಕಬಳಿಸಲು ಹವಣಿಸುತ್ತಿದ್ದರು. ಇತ್ತ ಕಡೆಯಿಂದ ಟಿಪ್ಪುಸುಲ್ತಾನ್ ಕಿತ್ತೂರಿನ ಮೇಲೆ ಯುದ್ಧ ಮಾಡಿ ದೇಸಾಯಿ ಮಲ್ಲಸರ್ಜನನ್ನು ಬಂಧಿಸಿ ಕಿತ್ತೂರಿನಲ್ಲಿ ಮೈಸೂರಿನ ಸೈನ್ಯದ ಭಾಗವೊಂದನ್ನು ಇರಿಸಿದ ಕಿತ್ತೂರಿನ ದೊರೆ ಮಲ್ಲಸರ್ಜರ ಮರಣದ ನಂತರ ಅಂತಃಪುರ ಬಿಟ್ಟು ಹೊರಬಂದ ಅವನ ಪತ್ನಿಯರಾದ ರುದ್ರಮ್ಮ ಚೆನ್ನಮ್ಮ ಇಬ್ಬರೂ ವೀರಮಹಿಳೆ ಇಬ್ಬರಲ್ಲೂ ರಾಷ್ಟ್ರ ಪ್ರೇಮ, ನಾಡ ಪ್ರೇಮ, ಸ್ವಾಭಿಮಾನ, ಸ್ವದೇಶಾಭಿಮಾನ, ಇರುವುದನ್ನು ಕಾಣಬಹುದು.

ಮಲ್ಲಸರ್ಜರ ಮರಣದ ನಂತರ ಶಿವಲಿಂಗ ಸರ್ಜ ಪಟ್ಟಕ್ಕೆ ಬಂದರೂ ಆತ ರೋಗಕ್ಕೆ ತುತ್ತಾಗಿ ಆಕಸ್ಮಿಕ ಮರಣವನ್ನಪ್ಪುತ್ತಾನೆ. ಆಗ ಕಿತ್ತೂರು ಸಿಂಹಾಸನದ ಉತ್ತರಾಧಿಕಾರಿಯನ್ನು ಹುಡುಕಲೇಬೇಕಾಗುತ್ತದೆ. ಬ್ರಿಟಿಷರ ಹೆದರಿಕೆಗೂ ಸೊಪ್ಪು ಹಾಕದೆ ಗಂಡೆದೆಯಿಂದ ದತ್ತಕ ಸ್ವೀಕರಿಸಿ ಆಂಗ್ಲರಿಗೆ ಸವಾಲು ಹಾಕಿ ನಿಲ್ಲುತ್ತಾಳೆ. ಬ್ರಿಟಿಷ್ ಸರ್ಕಾರದ ಪ್ರತಿನಿಧಿಯಾದ ಥ್ಯಾಕರೆಯು ತನ್ನ ಸೈನ್ಯದೊಂದಿಗೆ ಕಿತ್ತೂರ ಕೋಟೆಯ ಮೇಲೆ ಮುತ್ತಿಗೆ ಹಾಕುತ್ತಾನೆ. ಚೆನ್ನಮ್ಮ ತನ್ನ ಸೈನ್ಯವನ್ನು ಉದ್ದೇಶಿಸಿ ಕಿತ್ತೂರಿನ ವೀರರೇ ಶತ್ರು ಸೈನ್ಯದ ಮೇಲೆ ಚಂಡಮಾರುತದಂತೆ ನುಗ್ಗಿ ಅವರ ಶಿರಗಳನ್ನು ಚೆಂಡಾಡಿರಿ, ಬದುಕಿದರೆ ಸ್ವತಂತ್ರ್ಯ ಸತ್ತರೆ ಸ್ವರ್ಗ ಎಂದು ಸೈನಿಕರನ್ನು ಹುರಿದುಂಬಿಸುತ್ತಾಳೆ. ಥ್ಯಾಕರೆಯನ್ನು ಯುದ್ಧಕ್ಕೆ ಆಹ್ವಾನಿಸುತ್ತಾಳೆ. ಕಿತ್ತೂರು ಸೈನ್ಯ ಬ್ರಿಟಿಷರ ಸೈನ್ಯದ ಮೇಲೆ ಬಿದ್ದಿತು. ರಾಣಿ ಚೆನ್ನಮ್ಮ ಕುದುರೆಯನ್ನೇರಿ ಖಡ್ಗ ಹಿಡಿದು ಸೈನಿಕರಲ್ಲಿ ಸ್ಫೂರ್ತಿ ತುಂಬಿ ಹುರಿದುಂಬಿಸಿದಳು. ಐದು ದಿನಗಳ ಕಾಲ ನಡೆದ ಯುದ್ಧದಲ್ಲಿ ಚೆನ್ನಮ್ಮನಿಗೆ ಗೆಲುವಾಯಿತು. ಒಬ್ಬ ಮಹಿಳೆಯನ್ನು ಸೋಲಿಸುವುದು ಏನು ಮಹಾ ಎಂದು ಪರಿಗಣಿಸಿದ ಬ್ರಿಟಿಷರಿಗೆ ಥ್ಯಾಕರೆ ಸಾವಿನಿಂದ ಉತ್ತರ ಸಿಗುತ್ತದೆ. ಅವರು ದಿಕ್ಕಾಪಾಲಾಗಿ ಓಡಿಹೋಗುತ್ತಾರೆ.

ಬ್ರಿಟಿಷರು ಮತ್ತೆ ಯುದ್ಧ ಸಾರುತ್ತಾರೆ. ಯುದ್ಧದಲ್ಲಿ ಕಿತ್ತೂರಿಗೆ ಮೊದಲಿನ ಜಯ ದೊರಕುತ್ತದೆ. ಬ್ರಿಟಿಷರು ಎರಡನೆಯ ದಿನದ ಯುದ್ಧದಲ್ಲಿ ರಾಣಿ ಚನ್ನಮ್ಮ ಸೋಲು ಉಂಟಾಗಲು ಸಂಚು ರೂಪಿಸುತ್ತಾರೆ. ಚನ್ನಮ್ಮ ರಾಣಿ ಎಷ್ಟು ವಿರೋಧ ವ್ಯಕ್ತಪಡಿಸಿದರೂ ಹಿತಶತ್ರುಗಳಿಂದ ಸೋಲುತ್ತಾಳೆ. ಯುದ್ಧದಲ್ಲಿ ಜಯಗಳಿಸಿದ ಬ್ರಿಟಿಷರು ಕಿತ್ತೂರು ಸಂಸ್ಥಾನವನ್ನು ಕಂಪನಿಯ ಸರ್ಕಾರಕ್ಕೆ ಸೇರಿಸಿಕೊಳ್ಳುತ್ತಾರೆ. ಸಂಸ್ಥಾನದ ಬಾವುಟ ಇಳಿಸಿ ತಮ್ಮ ಧ್ವಜವನ್ನು ಏರಿಸುತ್ತಾರೆ. ಹೆಣ್ಣೆಂದರೆ ಭೋಗವಸ್ತು ಅವಳು ಮನೆಯನ್ನು ನೋಡಿಕೊಳ್ಳುವುದು ಮಕ್ಕಳನ್ನು ಸಾಕುವುದಕ್ಕೆ ಮಾತ್ರ ಸೀಮಿತ ಎಂಬ ಭಾವನೆಯಿದ್ದ ಆ ಕಾಲದಲ್ಲಿ ಕತ್ತಿ ಹಿಡಿದು ಬ್ರಿಟಿಷರಂತಹ ಬಲಶಾಲಿಗಳನ್ನು ಎದುರಿಸಿ ನಿಂತ ಕಿತ್ತೂರು ರಾಜ್ಯದ ಚೆನ್ನಮ್ಮ ವೀರ ಮಗಳಾಗಿ ಶೂರ ಸತಿಯಾಗಿ ಆದರ್ಶ ತಾಯಿಯಾಗಿ ವೀರವನಿತೆಯಾಗಿ ಚೆನ್ನಮ್ಮ ಅಗ್ರಗಣ್ಯಳಾಗಿದ್ದಾಳೆ.

**ಅಬ್ಬಕ್ಕ ರಾಣಿ**

ಉಳ್ಳಾಲದ ರಾಣಿ ಅಬ್ಬಕ್ಕ ದೇವಿಯು ವೀರ ಮಹಿಳೆಯಾಗಿ ಇತಿಹಾಸದಲ್ಲಿ ಕಂಡುಬರುತ್ತಾಳೆ. ಸ್ವಾತಂತ್ರ್ಯ ಪ್ರೇಮಿ, ಸಾಹಸಿ, ಸಾಹಸಕ್ಕೆ ಇನ್ನೊಂದು ಹೆಸರೇ ರಾಣಿ ಅಬ್ಬಕ್ಕ ಎಂದರೆ ತಪ್ಪಾಗಲಾರದು. ವಿಜಯಲಕ್ಷ್ಮಿ ಶಿವಕುಮಾರ ಕೌಟಗೆರವರು ತಮ್ಮ 'ಉಳ್ಳಾಲದ ವೀರರಾಣಿ ಅಬ್ಬಕ್ಕ' ಕಾದಂಬರಿಯಲ್ಲಿ ಅಬ್ಬಕ್ಕ ರಾಣಿಯ ವೀರಗಾಥೆಯನ್ನು ವಿವರಿಸಿದ್ದಾರೆ. ರಾಣಿ ಅಬ್ಬಕ್ಕ ಚಿಕ್ಕ ರಾಜ್ಯವೊಂದರ ಅಧಿಪತಿಯಾಗಿದ್ದರೂ ಪೋರ್ಚುಗೀಸರ ಬೃಹತ್ ಬಲದೆದುರು ನಿಂತು ಹೋರಾಡಿದ ಸಾಹಸಿ ಎಂದು ಈಕೆ ಪ್ರಸಿದ್ಧಳಾಗಿದ್ದಾಳೆ. ಪರಕೀಯ ದಾಸ್ಯಕ್ಕೆ ತುತ್ತಾದ ರಾಣಿ ಸ್ವಾತಂತ್ರ್ಯವನ್ನು ಪೋರ್ಚುಗೀಸರಿಗೆ ಸಿಂಹಸ್ವಪ್ನವಾಗಿದ್ದಳು. ಅಬ್ಬಕ್ಕ ಸೈನ್ಯದ ಬಗ್ಗೆ ಅಪಾರ ಒಲವಿದ್ದಳು. ಆಕೆ ಯುದ್ಧ ತಂತ್ರಗಳನ್ನು ತಿಳಿಯುವ ಕುತೂಹಲವನ್ನು ಬೆಳೆಸಿಕೊಂಡಿದ್ದಳು. ಕತ್ತಿವರಸೆಯಲ್ಲಿ ನೈಪುಣ್ಯತೆಯನ್ನು ಪಡೆದಿದ್ದಳು. ಅಬ್ಬಕ್ಕ ಕುದುರೆಯೇರಿ ನಡುರಾತ್ರಿಯಲ್ಲಿ ಕತ್ತಲೆಯನ್ನು ಸೀಳಿ ಹೋಗುತ್ತಾ ತನ್ನ ರಾಜ್ಯದ ಯೋಗಕ್ಷೇಮವನ್ನು ಗಮನಿಸುತ್ತಿದ್ದಳು. ಶತ್ರುಗಳನ್ನು ಹೊಡೆದೋಡಿಸುವಲ್ಲಿ ಶಕ್ತಿಮೀರಿ ದುಡಿಯುತ್ತಿದ್ದ ಅಬ್ಬಕ್ಕ ಧೈರ್ಯಕ್ಕೆ ಮತ್ತೊಂದು ಹೆಸರು ಎನ್ನುವಂತೆ ರಾಜ್ಯಭಾರವನ್ನು ಮಾಡಿದಳು. ಶೌರ್ಯ, ಪರಾಕ್ರಮ, ಕೆಚ್ಚುಗಳಿಂದ ಕೂಡಿದ್ದ ಧೀಮಂತ ಮಹಿಳೆಯಾಗಿದ್ದಳೆಂದು ತಿಳಿದುಬರುತ್ತದೆ. ಅಬ್ಬಕ್ಕನ ಆಡಳಿತದ ವೈಖರಿಯೇ ವಿಭಿನ್ನವಾಗಿತ್ತು. ಸ್ವತಃ ಜೈನ ಧರ್ಮೀಯಳಾಗಿದ್ದರೂ ಹಿಂದೂ ಮತ್ತು ಮುಸ್ಲಿಂರನ್ನು ಸಮಾನವಾಗಿಯೇ ಕಾಣುತ್ತಾ ಆಡಳಿತ ನಡೆಸುತ್ತಿದ್ದಳು. ಅಬ್ಬಕ್ಕ ಪೋರ್ಚುಗೀಸರಿಗೆ ಕೊಡಬೇಕಾಗಿದ್ದ ಕಪ್ಪವನ್ನು ತಡೆಹಿಡಿದಳು. 1555ರಲ್ಲಿ ಪೋರ್ಚುಗೀಸರಿಗೆ ನೌಕಾಧಿಕಾರಿ ದೋಮ್ ಆಳ್ವಾರೆಸ್‌ದ ಸಿಲ್ವೀರಾ ಮಂಗಳೂರನ್ನು ಆಕ್ರಮಿಸಿಕೊಳ್ಳಲು ಎರಡು ಹಡಗುಗಳ ಭಾರಿ ಪಡೆಯೊಂದಿಗೆ ಬಂದಾಗ ರಾಣಿ ವೀರಾವೇಶದಿಂದ ಯುದ್ಧ ಮಾಡಿದಳು. ಪೀಕ್ಸೋಟ್‌ನು ಉಳ್ಳಾಲವನ್ನು ಆಕ್ರಮಿಸಿದ್ದಲ್ಲದೆ ಅರಮನೆಯ ಸಭಾಂಗಣವನ್ನು ಪ್ರವೇಶಿಸಿದ್ದ ಅಂಥ ಸಂದರ್ಭದಲ್ಲಿ ಅಬ್ಬಕ್ಕ ತಪ್ಪಿಸಿಕೊಂಡು ಹೋಗಿ ಮಸೀದಿಯಲ್ಲಿ ಆಶ್ರಯಪಡೆದಳು. ಅದೇ ರಾತ್ರಿ 500 ಮುಸ್ಲಿಂರೊಂದಿಗೆ ಆರು ಸಾವಿರ ಮುಸ್ಲಿಂ ಸೈನಿಕರೊಂದಿಗೆ ದಾಳಿ ನಡೆಸಿದ್ದಳು ಯುದ್ಧದಲ್ಲಿ ಪೀಕ್ಸೋಟ್ಸ್‌ನನ್ನು ಕೊಂದುದಲ್ಲದೆ 20 ಜನ ಪೋರ್ಚುಗೀಸ್ ಸೈನಿಕರನ್ನು ಕೊಂದು ಅಬ್ಬಕ್ಕ ರಾಣಿ ಎಲ್ಲಾ ಧರ್ಮೀಯರೊಂದಿಗೂ ಸಹಮತದಿಂದಿದ್ದು ಆಡಳಿತ ಸೂತ್ರವನ್ನು ನಿಭಾಯಿಸುತ್ತಿದ್ದುದಕ್ಕೆ ಈ ಯುದ್ಧಗಳೇ ಸಾಕ್ಷಿಯಾಗುತ್ತವೆ. ರಾಣಿ ಅಬ್ಬಕ್ಕ ಇತಿಹಾಸದಲ್ಲಿ ಮರೆಯಲಾಗದ ಜನಾನುರಾಗಿಯಾಗಿ ರಾಣಿಯಾಗಿ ಉಳಿದಳು. ಹಗಲಿರುಳೆನ್ನದೆ ಸರಿ ಸಾಟಿಯಿಲ್ಲದೆ ತನ್ನನ್ನು ತೊಡಗಿಸಿಕೊಂಡು ನಾಡಿನ ಜನರ ರಕ್ಷಣೆಯ ಹೊಣೆಯನ್ನು ಹೊತ್ತಿರುವ ಅಬ್ಬಕ್ಕ ಯುದ್ಧಧ ರಾಣಿ ಎನ್ನುವ ಹೆಸರನ್ನು ಸಾರ್ಥಕಪಡಿಸಿಕೊಂಡಳು. ಪುರುಷರಾದ ಅರಸರುಗಳಿಗೂ ಅಸಾಧ್ಯವಾಗಿದ್ದಿರಬಹುದಾದ ಎಡಬಿಡದೆ ಯುದ್ಧದಲ್ಲಿ ಪಾಲುಗೊಂಡು ಯುದ್ಧ ಕೌಶಲ್ಯವನ್ನು ಮೆರೆಯುತ್ತ ಯುದ್ಧವ್ಯೂಹರಚನೆಯನ್ನು ಸಿದ್ಧಪಡಿಸಿ ನಾನಾ ರೀತಿಯಲ್ಲಿ ಹೋರಾಡುವುದಕ್ಕೆ ತಕ್ಕ ಸಿದ್ಧತೆಯನ್ನು ಕೈಗೊಳ್ಳುತ್ತಾಳೆ. ತನ್ನ ಜೀವನದ ಕೊನೆಯವರೆಗೂ ಪೋರ್ಚುಗೀಸರಿಗೆ ಸಿಂಹಸ್ವಪ್ನವಾಗಿ ಕಾಡುತ್ತಾಳೆ. ತನ್ನ ಜೀವಿತ ಕಾಲದಲ್ಲಿ ತೋರಿದ ಸಾಹಸವೇ ಚರಿತ್ರೆಯಲ್ಲಿ ಆಕೆಯ ಹೆಸರು ಚಿರಸ್ಥಾಯಿಯಾಗಿ ಉಳಿಯಲು ಕಾರಣವಾಯಿತು.

**ಒನಕೆ ಓಬವ್ವ**

ಚಿತ್ರದುರ್ಗದ ಓಬವ್ವ ಚಿತ್ರದುರ್ಗದ ನಾಯಕರ ಕಾಲದಲ್ಲಿ ಸಾಮಾನ್ಯ ಮಹಿಳೆಯರು ಕೂಡ ದುರ್ಗದ ಸಂಸ್ಕೃತಿಗೆ ತಮ್ಮದೇಯಾದ ಕೊಡುಗೆಯನ್ನು ನೀಡಿದ್ದಾರೆ. ಹೈದರ್‌ಅಲಿ ಸೈನ್ಯದ ಸುಮಾರು 200–250 ಮಂದಿ ಸೈನಿಕರನ್ನು ಕೊಂದು ಹಾಕಿದ ವಿಚಾರ ಸಾಮಾನ್ಯವೇನಲ್ಲ. ಚರಿತ್ರೆಯಲ್ಲಿ ದಿಟ್ಟತನದಿಂದ ಹೋರಾಡಿದ ಮಹಿಳೆಯರು ನಮ್ಮ ಕಣ್ಣ ಮುಂದೆ

ಹಾದು ಹೋಗುತ್ತಾರೆ. ಇವರೆಲ್ಲ ಮಹಾರಾಣಿಯರು ಇವರುಗಳು ತಮ್ಮ ರಾಜ್ಯಕ್ಕಾಗಿ ಉಳಿವಿನ ಜೊತೆಗೆ ದೇಶದ ಉಳಿವಿಗಾಗಿಯೂ ಕೆಚ್ಚೆದೆಯಿಂದ ಹೋರಾಡಿದ್ದು ನಿಜ. ಛಲವಾದಿ ಹೆಣ್ಣುಮಗಳಾದ ಓಬವ್ವ ಯಾವುದೇ ಯುದ್ಧ ತಂತ್ರಗಳನ್ನು ಅರಿತವಳಲ್ಲ ಕತ್ತಿ ಹಿಡಿದವಳೂ ಅಲ್ಲ ತನ್ನ ದೇಶದ ದೊರೆಯ ಉಳಿವಿಗಾಗಿ ಕೈಗೆ ಸಿಕ್ಕಿದ ಒನಕೆ ಹಿಡಿದು ಹೋರಾಡಿದ ಧೀಮಂತೆ. ಇವರ ಸಾಧನೆ ಚಿರಸ್ಮರಣೀಯವಾಗಿದೆ. ಇಡೀ ನಾಡೆ ಆಕೆಯ ಸಾಹಸವನ್ನು ಬಣ್ಣಿಸುತ್ತದೆ.

ಹಿರಿಯ ಸಾಹಿತಿ ತ.ರಾ.ಸು.ರವರ 'ದುರ್ಗಾಸ್ತಮಾನ' ಕಾದಂಬರಿಯಲ್ಲಿ ಓಬವ್ವೆಯ ಪ್ರಕರಣವನ್ನು ಚಿತ್ರಿಸಿದ್ದಾರೆ. ಗಂಡನಿಗೆ ಊಟಕ್ಕಿಟ್ಟು ನೀರು ತರಲು ಆಕೆ ಹೋಗುವುದಿಲ್ಲ, ಅಡುಗೆ ಮಾಡಿಟ್ಟು ಮಗುವನ್ನು ಮಲಗಿಸಿ ಗಂಡ ಬರುವುದರೊಳಗೆ ನೀರು ತರೋಣವೆಂದು ಹೋಗುತ್ತಾಳೆ. ಕಳ್ಳ ಗಂಡಿಯ ಬಳಿ ಶತ್ರುಗಳ ಸದ್ದು ಕೇಳಿ ಮನೆಗೆ ಹಿಂದಿರುಗಿದ ಆಕೆ ಒನಕೆ ಹಿಡಿದು ಬಂದು ಶತ್ರುಗಳ ಸದೆಬಡಿಯುತ್ತಾಳೆ.

ಬಿ.ಎಲ್.ವೇಣುರವರು 1981ರಲ್ಲೇ ಬರೆದ 'ಗಂಡುಗಲಿ ಮದಕರಿ ನಾಯಕ' ಐತಿಹಾಸಿಕ ಕಾದಂಬರಿಯಲ್ಲಿ ನಾಯಕನಿಗಿರುವಷ್ಟೇ ಪ್ರಾಶಸ್ತ್ಯವನ್ನು ಓಬವ್ವಳಿಗೂ ನೀಡಿದ್ದಾರೆ. ಓಬವ್ವ ಅಡುಗೆ ಮಾಡಿಟ್ಟ ಕೋಟೆ ಕಾವಲಿಗೆ ಹೋದ ಗಂಡನ ಬರುವಿಕೆಗಾಗಿ ಕಾದಿರುತ್ತಾಳೆ. ಯುದ್ಧದ ದಿನಗಳದು. ಯಾವಾಗ ಬರುವನೋ ನಿರ್ದಿಷ್ಟವಾಗಿ ಹೇಳುವಂತಿಲ್ಲ. ಬೇಸತ್ತ ಆಕೆ ಪಕ್ಕದ ಮನೆಯಿಂದ ತಂದ ಒನಕೆಯನ್ನು ಕೊಟ್ಟು ಬರಲು ಒನಕೆ ಹಿಡಿದು ಸಾಗುತ್ತಾಳೆ. ಕಳ್ಳಗಂಡಿ ಬಳಿ ಸದ್ದು, ಶತ್ರು ನುಸುಳಿ ಬರುವ ಹಿಂಡನ್ನು ಕಂಡು ವೀರಗಚ್ಚೆ ಹಾಕಿ ನಿಂತು ಸದೆ ಬಡಿದು ಹೆಣಗಳ ಬಣವ ಹೊಟ್ಟತ್ತಾಳೆ. ಈ ಸಂಹಾರ ಸಂದರ್ಭದಲ್ಲೆ ಬಂದ ಹನುಮಪ್ಪ ನಿಬ್ಬೆರಗಾಗಿ ಗಾಬರಿಗೊಂಡು ಕಹಳೆ ಊದುತ್ತಾನೆ. ಸೇನೆ ಬರುತ್ತದೆ. ಅಷ್ಟರಲ್ಲಿ ಶತ್ರು ಸೈನಿಕನಿಗೆ ಓಬವ್ವ ಬಲಿಯಾಗುತ್ತಾಳೆ. ಓಬವ್ವ ತೋರಿದ ಸಮಯಪ್ರಜ್ಞೆ, ದಿಟ್ಟತನ ರಾಜನ ಮೇಲಿನ ಅಭಿಮಾನ, ಗೌರವ, ಕೋಟೆಯ ಮೇಲೆ ಆಕೆಗಿದ್ದ ಪ್ರೀತಿಯ ದ್ಯೋತಕ ಎದ್ದು ಕಾಣುತ್ತದೆ.

**ಉಪಸಂಹಾರ**

ಬಹುಶಃ ಮಹಿಳೆಯರು ಕೆಲಸ ಮಾಡದ ಜಾಗಗಳಿಲ್ಲ. ಮನೆಯ ಅಡುಗೆ ಮನೆಯಿಂದ ಹಿಡಿದು ಭಾರತೀಯ ವಾಯುಪಡೆಯ ತನಕ ಮಹಿಳೆ ತನ್ನದೇ ಆದ ಸ್ಥಾನ ಪಡೆದುಕೊಂಡಿದ್ದಾಳೆ. ಈಗ ಯುದ್ಧ ವಿಮಾನವನ್ನು ಹಾರಿಸುವುದರಲ್ಲೂ ಕೈಜೋಡಿಸಿದ್ದಾಳೆ. ವಾಯುಪಡೆ ಮತ್ತು ನೌಕಪಡೆಯಲ್ಲೂ ಕೂಡಾ ಈಗಾಗಲೇ ಮಹಿಳೆಯರು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸೈನಿಕನಿಂದ ಮೊದಲ್ಗೊಂಡು ಸೇನಾಪತಿರವರೆಗಿನ ಅನೇಕ ಹಂತಗಳಲ್ಲಿ ನಿಂತು ಪುರುಷರಂತೆ ಹೋರಾಡದಿದ್ದರೂ ಪ್ರಸಂಗಕ್ಕೆ ಓಗೊಟ್ಟ ವೀರಮಹಿಳೆಯರು ಹಲವರಿದ್ದಾರೆ. ಕನ್ನಡ ನಾಡಿನಲ್ಲಿ ವೀರ ಪುರುಷರ ಜೀವನಕ್ಕೆ ಕೊರತೆಯಿಲ್ಲ. ಸಿಂಹ ಶಾರ್ದೂಲಗಳಂತೆ ವೈರಿಗಳ ನಿರ್ನಾಮಕ್ಕೆ ಹೋರಾಡಿದ ಮಹಿಳೆಯರಲ್ಲಿ ಅಬ್ಬಕ್ಕರಾಣಿ ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ ಪ್ರಮುಖರಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ವೇಣು ಬಿ.ಎಲ್. (2016). *ಐತಿಹಾಸಿಕ ಚಿತ್ರದುರ್ಗದ ಒನಕೆ ಓಬವ್ವ : ಒಂದು ಚಿಂತನೆ.* ಚಿಲುಮೆ. http://chilume.com/?p=6375
- ವಿಜಯದೇವಿ. (2013). *ರಾಣಿಯರು ಮತ್ತು ವೀರಮಹಿಳೆಯರು.* ಕರ್ನಾಟಕ ರಾಜ್ಯ ಮಹಿಳಾ
- ವಿಶ್ವವಿದ್ಯಾಲಯ.
- ಸ. ರಾ. ಸುಳಕೊಡೆ. (2015). ಕಿತ್ತೂರು ಕಲಿಗಳು ಮತ್ತು ಸ್ವಾತಂತ್ರ್ಯ ಸಂಗ್ರಾಮ. ಹೇಮಂತ ಸಾಹಿತ್ಯ ಪ್ರಕಾಶನ.
- ರೇಣುಕಾ ಆರ್. (2020). ಕನ್ನಡ ಕಾವ್ಯಗಳಲ್ಲಿ ಯುದ್ಧ ಮತ್ತು ಯುಗಧರ್ಮ. ಬಾಣಗೆರೆ ಪ್ರಕಾಶನ.